**ಇಂದು ದಿನಾಂಕ: 08.04.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಸಿ.ಪಿ.ಎಂ.ವಕೀಲರಿಂದಃ**

ನಾನು ಓದಿಲ್ಲ. ನನ್ನ ತಮ್ಮ 1 ನೇ ಪ್ರತಿವಾದಿಯು ಓದಿಲ್ಲ. ನಮ್ಮ ತಂದೆಗೆ ನಾವು 5 ಜನ ಮಕ್ಕಳು. ನಮ್ಮ ತಂದೆ ಬದುಕಿದ್ದಾಗ ಏನೇನು ವ್ಯವಹಾರ ಮಾಡುತ್ತಿದ್ದರು ಎಂದು ಗೊತ್ತು. ನನ್ನ ತಂದೆ ತೀರಿಕೊಂಡು 30 ವರ್ಷಕ್ಕಿಂತ ಜಾಸ್ತಿಯಾಗಿದೆ. ನನ್ನ ತಾಯಿ ತೀರಿಕೊಂಡು 1 ವರ್ಷ 6 ತಿಂಗಳಾಯಿತು. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿ ಬದುಕಿದ್ದವರೆಗೂ ಮನೆಯ ವ್ಯವಹಾರ ಮಾಡುತ್ತಿದ್ದರು. ನನ್ನ ತಾಯಿ ಮನೆಯ ವ್ಯವಹಾರ ಹೊರತುಪಡಿಸಿ ಬೇರೆ ವ್ಯವಹಾರ ಮಾಡುತ್ತಿದ್ದುದು ಗೊತ್ತಿಲ್ಲ. 1 ನೇ ವಾದಿ ಮತ್ತು 1 ನೇ ಪ್ರತಿವಾದಿಯ ತಂದೆ ಕಾಳಿಂಗೇಗೌಡರಿಗೆ ದಾವಾ ಆಸ್ತಿಯು ವಿಭಾಗದ ಮೂಲಕ ಬಂದಿತ್ತು. ನನ್ನ ತಾತನಿಗೆ 6 ಜನ ಮಕ್ಕಳು. ಅವರೆಲ್ಲರೂ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದರು. ಬಾಯಿ ಮಾತಿನ ಮೂಲಕ ವಿಭಾಗ ಮಾಡಿಕೊಂಡಿದ್ದಾರೆ. ನನ್ನ ತಂದೆಯ ಭಾಗಕ್ಕೆ 4 ಎಕರೆ 13 ಗುಂಟೆ ಜಮೀನು ಬಂದಿತ್ತು. ನಮ್ಮ ತಾತನಿಂದ ತಂದೆಯ ಹೆಸರಿಗೆ ಖಾತೆಯಾಗಿರುವ ಬಗ್ಗೆ ಮ್ಯುಟೇಷನ್ ಹಾಜರುಪಡಿಸಿದ್ದೇನೆ. ನಮ್ಮ ಚಿಕ್ಕಪ್ಪ ಮತ್ತು ದೊಡ್ಡಪ್ಪರವರಿಗೂ ಅಷ್ಟಷ್ಟೇ ಜಮೀನು ಬಂದಿತ್ತು. ಅದಕ್ಕೆ ಸಂಬಂಧಿಸಿದಂತೆ ದಾಖಲೆ ಕೊಟ್ಟಿದ್ದೇನೆ. 4 ಎಕರೆ 3 ಗುಂಟೆ ಹೊರತುಪಡಿಸಿ ನಮಗೆ ಬೇರೆ ಜಮೀನು ಇರುವುದಿಲ್ಲ. ಹುಣಸೆಕುಪ್ಪೆಯ ಒಂದು ವಾಸದ ಮನೆಯಲ್ಲಿ 9-10 ವರ್ಷಗಳ ಹಿಂದೆ ಎರಡೂ ಭಾಗ ಮಾಡಿಕೊಂಡಿದ್ದೇವೆ. ಅದರ ಪಕ್ಕದಲ್ಲಿಯೇ 2 ಬ್ಯಾರನ್ ಮನೆಗಳು ಇವೆ. ಬ್ಯಾರನ್ ಮನೆಗಳಿಗೆ ಶೀಟ್ ನಿಂದ ಔಟ್ ಹೌಸ್ ನಿರ್ಮಿಸಲಾಗಿದೆ. ನಮ್ಮ ಕುಟುಂಬಕ್ಕೆ 4 ಎಕರೆ 13 ಗುಂಟೆ ಜಮೀನು, 2 ಬ್ಯಾರನ್ ಮನೆ ಮತ್ತು ವಾಸದ ಮನೆ ಹೊರತುಪಡಿಸಿ ಬೇರೆ ಆಸ್ತಿಗಳು ಇರುವುದಿಲ್ಲ. ನನ್ನ ಪತ್ನಿ ಮತ್ತು 1 ನೇ ಪ್ರತಿವಾದಿಯ ಪತ್ನಿ ಪರಸ್ಪರ ಜಗಳವಾಡುತ್ತಿದ್ದ ಕಾರಣ ನಾನು ಪ್ರತ್ಯೇಕವಾಗಿ ವಾಸವಿದ್ದೆ. ನನಗೆ ಮದುವೆಯಾದ ಕಾಲದಿಂದಲೂ ನಮ್ಮ ಕುಟುಂಬಕ್ಕೆ ಪ್ರತ್ಯೇಕವಾಗಿ ಪಡಿತರ ಚೀಟಿ ಇದೆ. ನನ್ನ ಸಹೋದರರಿಗೂ ಸಹ ಪ್ರತ್ಯೇಕ ಪಡಿತರ ಚೀಟಿ ಇದೆ. ನಮ್ಮ ನಮ್ಮ ಮನೆಗಳಿಗೆ ಪ್ರತ್ಯೇಕವಾಗಿ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದೇವೆ. ನಮ್ಮ ಕುಟುಂಬದ

ಆಸ್ತಿಗಳೆಲ್ಲವೂ ನಮ್ಮ ತಾಯಿಯ ಹೆಸರಿನಲ್ಲಿವೆ. ವಾಸದ ಮನೆಯನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ವಾಸದ ಮನೆ ಎಷ್ಟನೇ ಐಟಂ ಎಂದರೆ ಗೊತ್ತಿಲ್ಲ. ವಾಸದ ಮನೆಗೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಆ ದಾಖಲೆಗಳು ಸಹ ನಮ್ಮ ತಾಯಿಯ ಹೆಸರಿನಲ್ಲಿವೆ. ಅದನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನನ್ನ ತಂದೆ ತೀರಿಕೊಳ್ಳುವ ಮೊದಲು ನನ್ನ ಸಹೋದರಿ ಸುನಂದ ಮದುವೆಯಾಗಿರಲಿಲ್ಲ ಉಳಿದವರಿಗೆಲ್ಲರಿಗೂ ಆಗಿತ್ತು. 1 ನೇ ಪ್ರತಿವಾದಿಯ ಮದುವೆಯ ಸಮಯದಲ್ಲಿ ನನ್ನ ತಂದೆ ಬದುಕಿರಲಿಲ್ಲ. ನನ್ನ ತಂದೆ ಇದ್ದಾಗ ಕೈ ಸಾಲ ಮಾಡುತ್ತಿದ್ದರು. ನನ್ನ ತಾಯಿಯು ಕೂಡ ಕೈ ಸಾಲ ಮತ್ತು ಬ್ಯಾಂಕ್ ನಿಂದ ಸಾಲ ಮಾಡುತ್ತಿದ್ದರು. ನನ್ನ ತಾಯಿ ತೀರಿಕೊಳ್ಳುವ ಕಾಲಕ್ಕೆ ಜಾಕಿ ಸುರೇಶರವರಿಗೆ ಕೊಡಬೇಕಾಗಿದ್ದ ಭೋಗ್ಯದ ಹಣ ಹೊರತುಪಡಿಸಿ ಬೇರೆ ಸಾಲವಿರಲಿಲ್ಲ. ಆ ಭೋಗ್ಯದ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನನ್ನ ತಾಯಿ ಬದುಕಿದ್ದಾಗಲೇ ಭೋಗ್ಯ ತಿರುವಳಿ ಮಾಡಿಸಿಕೊಂಡಿದ್ದೇನೆ. 10-12 ವರ್ಷದ ಹಿಂದೆ ಭೋಗ್ಯ ತಿರುವಳಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಮ್ಮ ಕುಟುಂಬದ ವ್ಯವಹಾರನ್ನು ಯಾರು ನೋಡಿಕೊಳ್ಳುತ್ತಿದ್ದಾರೆ ಎಂದರೆ ಪ್ರತ್ಯೇಕವಾಗಿ ವಾಸವಿದ್ದೇವೆ ಆದರೆ ಒಟ್ಟಾಗಿ ವ್ಯವಹಾರ ಮಾಡುತ್ತಿದ್ದೇವೆ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ. ಒಂದು ವರ್ಷಕ್ಕೆ ಎಷ್ಟು ಆದಾಯ ಎಂದರೆ ಖರ್ಚು ಕಳೆದು ರೂ.70,000/- ಆದಾಯವಿದೆ. ಹೊಗೆಸೊಪ್ಪು ಮಾರಾಟ ಮಾಡಿ ಬಂದ ಹಣ ನನ್ನ ತಾಯಿ ಬ್ಯಾಂಕ್ ಖಾತೆಗೆ ಹೋಗುತ್ತದೆ. ಬ್ಯಾರನ್ ಲೈಸೆನ್ಸ ಕೂಡ ನನ್ನ ತಾಯಿಯ ಹೆಸರಿನಲ್ಲಿದೆ. ನಾನು ಮತ್ತು ನನ್ನ 3 ಜನ ಸಹೋದರಿಯರು ದಾವೆ ಸಲ್ಲಿಸಲು ಮಾಹಿತಿ ಕೊಟ್ಟಿದ್ದಾರೆ. ಅದರಲ್ಲಿ ಏನು ಬರೆದಿದ್ದಾರೆ ಎಂದರೆ ಜಮೀನು ಬಗ್ಗೆ ಬರೆದಿದ್ದಾರೆ. 1 ನೇ ಪ್ರತಿವಾದಿ ತನ್ನ ಮಗನ ಹೆಸರಿಗೆ ಭೋಗ್ಯ ತಿರುವಳಿ ಮಾಡಿಸಿಕೊಂಡಿದ್ದಾರೆ. ಆ ಭೋಗ್ಯ ತಿರುವಳಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಭೋಗ್ಯ ಪತ್ರ ಮೋಸದಿಂದ ತಿರುವಳಿ ಮಾಡಿಸಿಕೊಂಡಿದ್ದಾರೆ ಎಂದು ಸಂಬಂಧಪಟ್ಟ ನ್ಯಾಯಾಲಯದಲ್ಲಿ ಕೇಸು ಹಾಕಿಲ್ಲ. ನನ್ನ ತಾಯಿ ರೂ.80,000/- ಗೆ ಭೋಗ್ಯ ಮಾಡಿದ್ದರು. ಕೈ ಸಾಲ ತಿರುವಳಿ ಮಾಡಲು ಭೋಗ್ಯ ಮಾಡಿದ್ದರು. ನನ್ನ ಮಗಳನ್ನು ಮದುವೆ ಮಾಡಿ ಇಪ್ಪತ್ತು ವರ್ಷವಾಗಿದೆ. ನನ್ನ

ಮಗಳ ಮದುವೆಗೆ 1 ರಿಂದ 2 ಲಕ್ಷ ರೂಪಾಯಿ ಖರ್ಚು ಮಾಡಿದೆ. ನನ್ನ ಪತ್ನಿ ತವರು ಮನೆಯವರು ಆರ್ಥಿಕವಾಗಿ ಸಬಲರಾಗಿದ್ದಾರೆ ಆದ್ದರಿಂದ ನನ್ನ ಪತ್ನಿ ಅವರ ತವರು ಮನೆಯಿಂದ ಹಣ ಪಡೆದುಕೊಂಡು ಬಂದಿದ್ದಾರೆ. ನಾನು ಮತ್ತು 1 ನೇ ಪ್ರತಿವಾದಿ 20 ವರ್ಷಗಳ ಹಿಂದೆಯೇ ತಲಾ 2 ಎಕರೆ 6 ಗುಂಟೆ ಮತ್ತು 13X13 ಅಡಿ ಅಳತೆಯ ಒಂದು ಬ್ಯಾರನ್ ಮನೆ ಮತ್ತು ಲೈಸೆನ್ಸ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. 2 ಎಕರೆ 6 ಗುಂಟೆ ಪೈಕಿ ನಾನು ಜಾಕಿ ಸುರೇಶರವರಿಗೆ 1 ಎಕರೆ 5 ಗುಂಟೆ ಮಾರಾಟ ಮಾಡಲು ಪ್ರಯತ್ನಪಟ್ಟಿದ್ದೇನೆ ಎಂದರೆ ಸುಳ್ಳು. ಆ ಸಮಯದಲ್ಲಿ ನಾನು ನನ್ನ ತಾಯಿ, 1 ನೇ ಪ್ರತಿವಾದಿ ಸಹಿ ಹಾಕಿದರೆ ಮಾತ್ರ ಹಣ ಕೊಡುವುದಾಗಿ ಜಾಕಿ ಸುರೇಶ ಹೇಳಿದ್ದರಿಂದ ನಾವು ಸಹಿ ಮಾಡಿ ಕ್ರಯ ಪತ್ರ ಮಾಡಿಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಜಾಕಿ ಸುರೇಶ ನನ್ನ ಮಗಳ ಮದುವೆಗೆ ಹಣ ಕೊಡುವುದಿಲ್ಲ ಎಂದು ಹೇಳಿದ ಕಾರಣ ಮತ್ತು 1 ನೇ ಪ್ರತಿವಾದಿಯ ಹೆಸರಿನಲ್ಲಿಯೂ ಆರ್.ಟಿ.ಸಿ., ಇದ್ದ ಕಾರಣ ಕ್ರಯ ಪತ್ರಕ್ಕೆ 1 ನೇ ಪ್ರತಿವಾದಿ ಸಹಿ ಮಾಡಿದ್ದಾರೆ ಎಂದರೆ ಸುಳ್ಳು. ನಾನು ನನ್ನ ತಾಯಿ ಮತ್ತು 1 ನೇ ಪ್ರತಿವಾದಿ ಜಾಕಿ ಸುರೇಶ ಮಾರಾಟ ಮಾಡಿದ್ದ ಜಮೀನನ್ನು ಅವರು ತನ್ನ ದರದ್ದು ನಿಮಿತ್ತ ಬೇರೆಯವರಿಗೆ ಮಾರಾಟ ಮಾಡುವುದಾಗಿ ಹೇಳಿದ್ದರಿಂದ ಬೇರೆಯವರು ಎಷ್ಟು ಹಣ ಕೊಡುತ್ತಾರೆ ಅಷ್ಟು ಹಣ ಕೊಟ್ಟರೆ ನಮ್ಮ ಕುಟುಂಬಕ್ಕೆ ಜಮೀನು ಮಾರಾಟ ಮಾಡುವುದಾಗಿ ಹೇಳಿದ್ದರು ಎಂದರೆ ಸುಳ್ಳು. 1 ನೇ ಪ್ರತಿವಾದಿಯ ಮಗಳಿಗೆ ಮದುವೆಯಾಗಿ 18 ವರ್ಷ ಆಗಿದೆ. ಅವರ ಮದುವೆಗೆ ನಾವೆಲ್ಲರೂ ಸೇರಿದ್ದೇವು. 1 ನೇ ಪ್ರತಿವಾದಿಯ ಮಗಳು ಹೊಳೆನರಸೀಪುರ ತಾಲ್ಲೂಕು, ಓಡನಹಳ್ಳಿಯಲ್ಲಿ ಇದ್ದಾರೆ. 1 ನೇ ಪ್ರತಿವಾದಿಯ ಮಗಳ ಗಂಡ ಆರ್ಥಿಕವಾಗಿ ಜೋರಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಮಗಳು ಮೋಸದಿಂದ ಹೊಲ ಬರೆಸಿಕೊಂಡಿರುವ ಕಾರಣ ನಮಗೂ ಅವರಿಗೂ ವೈಮನಸ್ಸು ಇದೆ ಆದ್ದರಿಂದ ಅವರ ಮನೆಗೆ ಹೋಗುವುದಿಲ್ಲ. ಜಾಕಿ ಸುರೇಶರವರಿಂದ 2 ನೇ ಪ್ರತಿವಾದಿ ಖರೀದಿಸಿರುವ ಸಂಬಂಧ ಬೇರೆ ಕೇಸು ಹಾಕಿರುವುದಿಲ್ಲ. ನಮಗೆ ಜಮೀನು ಬರೆದುಕೊಡುವ ಬದಲು 2 ನೇ ಪ್ರತಿವಾದಿಗೆ ಯಾಕೆ ಜಮೀನು ಬರೆದಿದ್ದೀರಿ ಎಂದು ಜಾಕಿ ಸುರೇಶರವರನ್ನು ಕೇಳಿದ್ದೇನೆ ಅದಕ್ಕೆ ಅವರು 1 ನೇ ಪ್ರತಿವಾದಿ ಪುನಃ ವಾಪಸ್ಸು

ಜಮೀನು ಬರೆದುಕೊಡುವುದಾಗಿ ಹೇಳಿದ್ದಾರೆ ಎಂದು ನನಗೆ ತಿಳಿಸಿದರು.ಜಾಕಿ ಸುರೇಶರವರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇನೆ.

**ಮುಂದುವರೆದ ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**